# ನದಿ ಮಂಡಲಿ ಅಧಿನಿಯಮ, 1956

16.08.2007ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 38ನೇ ಸಂಪುಟದ 1ನೇ ಸಂಚಿಕೆಯಲ್ಲಿ 222 ರಿಂದ 228ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

## ವಿಷಯಾನುಕ್ರಮಣಿಕೆ

**ಪ್ರಕರಣಗಳು :**

### ಅಧ್ಯಾಯ I

### ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಕೇಂದ್ರ ಸರ್ಕಾರದ ನಿಯಂತ್ರಣದ ವಿಹಿತತೆಯ ಬಗ್ಗೆ ಘೋಷಣೆ
3. ಪರಿಭಾಷೆಗಳು

### ಅಧ್ಯಾಯ- II

### ನದಿ ಮಂಡಲಿಗಳ ಸ್ಥಾಪನೆ

4. ಮಂಡಲಿಗಳ ಸ್ಥಾಪನೆ
5. ಮಂಡಲಿಯ ರಚನೆ
6. ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು
7. ಯಾರೇ ಸದಸ್ಯನ ತಾತ್ಕಾಲಿಕ ಗೈರುಹಾಜರಿ
8. ಮಂಡಲಿಯ ಸಭೆಗಳು
9. ಮಂಡಲಿಯಲ್ಲಿ ಸ್ಥಾನಗಳು ಖಾಲಿ ಇರುವುದು ಮುಂತಾದವುಗಳ ನಿಮಿತ್ತ ಅದರ ಕಾರ್ಯಗಳು ಅಥವಾ ವ್ಯವಹರಣೆಗಳು ಅಸಿಂಧುವಾಗದಿರುವುದು
10. ಸಲಹಾ ಸಮಿತಿಯ ನೇಮಕಾತಿ
11. ನಿರ್ದಿಷ್ಟ ಉದ್ದೇಶಗಳಿಗಾಗಿ ಮಂಡಲಿಯ ಜೊತೆ ಕೆಲವು ವ್ಯಕ್ತಿಗಳ ತಾತ್ಕಾಲಿಕ ಸಹಯೋಗ
12. ಮಂಡಲಿಯ ಸಿಬ್ಬಂದಿ

### ಅಧ್ಯಾಯ- III

### ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು

13. ಯಾವ ವಿಷಯಗಳ ಬಗ್ಗೆ ಸಲಹೆ ನೀಡಲು ಮಂಡಲಿಯನ್ನು ಅಧಿಕೃತಗೊಳಿಸಬಹುದು
14. ಮಂಡಲಿಯ ಪ್ರಕಾರ್ಯಗಳು

15. ಮಂಡಲಿಯು ಸ್ಕೀಮುಗಳನ್ನು ಸಿದ್ಧಪಡಿಸುವುದು ಮತ್ತು ಅವುಗಳನ್ನು ಕಾರ್ಯಗತಗೊಳಿಸುವುದು

16. ಮಂಡಲಿಯ ಸಾಮಾನ್ಯ ಅಧಿಕಾರಗಳು

17. ಮಂಡಲಿಗೆ ಸಂದಾಯ

18. ಮಂಡಲಿಯ ನಿಧಿ

19. ಆಯವ್ಯಯ

20. ವಾರ್ಷಿಕ ವರದಿ

21. ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ

## ಅಧ್ಯಾಯ- IV

### ಸಂಕೀರ್ಣ

22. ಮಧ್ಯಸ್ಥಿಕೆ

23. ವಿವರಪಟ್ಟಿಕೆಗಳು ಮತ್ತು ವರದಿಗಳು

24. ಅಧಿಕಾರಗಳ ಪ್ರತ್ಯಾಯೋಜನೆ

25. ಮಂಡಲಿಯ ಸದಸ್ಯರು ಮತ್ತು ಅಧಿಕಾರಿಗಳು ಲೋಕನೌಕರರಾಗಿರುವುದು.

26. ಸದ್ಭಾವನೆಯಿಂದ ಕೈಗೊಳ್ಳಲಾದ ಕ್ರಮದ ರಕ್ಷಣೆ

27. ಮಂಡಲಿಯ ವಿಘಟನೆ ಮತ್ತು ಆಸ್ತಿಗಳ ಹಾಗೂ ಹೊಣೆಗಾರಿಕೆಗಳ ವರ್ಗಾವಣೆ

28. ನಿಯಮ ರಚನಾಧಿಕಾರ

29. ವಿನಿಯಮ ರಚನಾಧಿಕಾರ

# ನದಿ ಮಂಡಲಿ ಅಧಿನಿಯಮ, 1956

(1956ರ ಅಧಿನಿಯಮ ಸಂಖ್ಯೆ 49)

[12ನೇ ಸೆಪ್ಟೆಂಬರ್, 1956]

ಅಂತರ ರಾಜ್ಯ ನದಿಗಳ ಮತ್ತು ನದಿ ಕಣಿವೆಗಳ ನಿಯಂತ್ರಣ ಮತ್ತು ಅಭಿವೃದ್ಧಿಗಾಗಿ ನದಿ ಮಂಡಲಿಗಳನ್ನು ಸ್ಥಾಪಿಸಲು ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಏಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ- I

## ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ನದಿ ಮಂಡಲಿ ಅಧಿನಿಯಮ, 1956 ಎಂದು ಕರೆಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಕೇಂದ್ರ ಸರ್ಕಾರದ ನಿಯಂತ್ರಣದ ವಿಹಿತತೆಯ ಬಗ್ಗೆ ಘೋಷಣೆ.-** ಕೇಂದ್ರ ಸರ್ಕಾರವು, ಅಂತರ ರಾಜ್ಯ ನದಿಗಳ ಮತ್ತು ನದಿ ಕಣಿವೆಗಳ ವಿನಿಯಮನವನ್ನು ಮತ್ತು ಅಭಿವೃದ್ಧಿಯನ್ನು ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಷ್ಟರ ಮಟ್ಟಿಗೆ ತನ್ನ ನಿಯಂತ್ರಣದಲ್ಲಿ ತೆಗೆದುಕೊಳ್ಳುವುದು ಸಾರ್ವಜನಿಕ ಹಿತದೃಷ್ಟಿಯಿಂದ ವಿಹಿತವೆಂದು ಈ ಮೂಲಕ ಘೋಷಿಸಲಾಗಿದೆ.

**3. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಂಡಲಿ" ಎಂದರೆ 4ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ನದಿ ಮಂಡಲಿ;

(ಬಿ) ಮಂಡಲಿಯ ಸಂಬಂಧದಲ್ಲಿ "ಹಿತಾಸಕ್ತಿ ಹೊಂದಿರುವ ಸರ್ಕಾರಗಳು" ಎಂದರೆ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ಈ ಅಧಿನಿಯಮದ ಮೇರೆಗೆ, ಮಂಡಲಿಯ ಪ್ರಕಾರ್ಯಗಳಲ್ಲಿ ಹಿತಾಸಕ್ತಿ ಹೊಂದುವ ಸಂಭವವಿರುವ ಅಥವಾ ಆ ಪ್ರಕಾರ್ಯಗಳಿಂದ ಬಾಧಿತರಾಗುವ ಸಂಭವವಿರುವ ರಾಜ್ಯ ಸರ್ಕಾರಗಳು;

(ಸಿ) "ಸದಸ್ಯ" ಎಂದರೆ ಮಂಡಲಿಯ ಸದಸ್ಯ ಮತ್ತು ಆ ಪದದಲ್ಲಿ ಅದರ ಅಧ್ಯಕ್ಷನೂ ಸೇರುತ್ತಾನೆ;

(ಡಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಗೊತ್ತುಪಡಿಸಲಾದುದು.

## ಅಧ್ಯಾಯ - II

## ನದಿ ಮಂಡಲಿಗಳ ಸ್ಥಾಪನೆ

**4. ಮಂಡಲಿಗಳ ಸ್ಥಾಪನೆ.**- (1) ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ರಾಜ್ಯ ಸರ್ಕಾರದಿಂದ ಅಥವಾ ಅನ್ಯಥಾ ಮನವಿ ಬಂದ ಮೇಲೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂತರ ರಾಜ್ಯ ನದಿಯ ಅಥವಾ ಕಣಿವೆಯ ಅಥವಾ ಅದರ ಯಾವುದೇ ನಿರ್ದಿಷ್ಟ ಭಾಗದ ವಿನಿಯಮ ಅಥವಾ ಅಭಿವೃದ್ಧಿಯ ಬಗ್ಗೆ ಹಿತಾಸಕ್ತಿ ಹೊಂದಿರುವ ಸರ್ಕಾರಗಳಿಗೆ ಸಲಹೆ ನೀಡಲು ಮತ್ತು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸಲು ನದಿ ಮಂಡಲಿಯೊಂದನ್ನು ಸ್ಥಾಪಿಸಬಹುದು ಮತ್ತು ಬೇರೆ ಬೇರೆ ಅಂತರ ರಾಜ್ಯ ನದಿಗಳು ಮತ್ತು ನದಿ ಕಣಿವೆಗಳ ಬಗ್ಗೆ ಬೇರೆ ಬೇರೆ ಮಂಡಲಿಗಳನ್ನು ಸ್ಥಾಪಿಸಬಹುದು:

ಪರಂತು, ಮಂಡಲಿಯನ್ನು ಸ್ಥಾಪಿಸುವ ಪ್ರಸ್ತಾಪ, ಮಂಡಲಿಯ ಸದಸ್ಯರಾಗಿ ನೇಮಕ ಮಾಡಬೇಕಾದ ವ್ಯಕ್ತಿಗಳ ಬಗ್ಗೆ ಮತ್ತು ಮಂಡಲಿಯು ನಿರ್ವಹಿಸಬೇಕಾದ ಪ್ರಕಾರ್ಯಗಳ ಬಗ್ಗೆ ಸಮಾಲೋಚಿಸಿದ ತರುವಾಯ ಹೊರತು ಅಂಥ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಸರಿನಲ್ಲಿ ಮಂಡಲಿಯನ್ನು ಸ್ಥಾಪಿಸಬಹುದು.

(3) ಹಾಗೆ ಸ್ಥಾಪಿತವಾದ ಪ್ರತಿಯೊಂದು ಮಂಡಲಿಯು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಸದರಿ ಹೆಸರಿನಲ್ಲಿ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(4) ಪ್ರತಿಯೊಂದು ಮಂಡಲಿಯು, (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನದಿಯ (ಅದರ ಉಪ ನದಿಗಳಿದ್ದರೆ ಅವುಗಳನ್ನೊಳಗೊಂಡು) ಅಥವಾ ನದಿ ಕಣಿವೆಗಳ ಪರಿಮಿತಿಯೊಳಗೆ ತನ್ನ ಅಧಿಕಾರ ವ್ಯಾಪ್ತಿ ಚಲಾಯಿಸತಕ್ಕದ್ದು ಮತ್ತು ಹಾಗೆ ನಿರ್ದಿಷ್ಟಪಡಿಸಲಾದ ಪ್ರದೇಶವನ್ನು ಮಂಡಲಿಯ ಕಾರ್ಯಾಚರಣೆ ಪ್ರದೇಶವೆಂದು ಕರೆಯತಕ್ಕದ್ದು.

**5. ಮಂಡಲಿಯ ರಚನೆ.**- (1) ಮಂಡಲಿಯು, ಕೇಂದ್ರ ಸರ್ಕಾರವು ನೇಮಕ ಮಾಡಲು ಸೂಕ್ತವೆಂದು ಭಾವಿಸುವಂಥ ಒಬ್ಬ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(2) ಒಬ್ಬ ವ್ಯಕ್ತಿಯು, ನೀರಾವರಿ, ಎಲೆಕ್ಟ್ರಿಕಲ್ ಇಂಜಿನಿಯರಿಂಗ್, ಪ್ರವಾಹ ನಿಯಂತ್ರಣ, ನೌಕಾ ಸಂಚಾರ, ಜಲ ಸಂರಕ್ಷಣೆ, ಭೂಸಾರ ಸಂರಕ್ಷಣೆ, ಆಡಳಿತ ಅಥವಾ ಹಣಕಾಸು- ಈ ವಿಷಯಗಳಲ್ಲಿ ವಿಶೇಷ ಜ್ಞಾನವನ್ನು ಮತ್ತು ಅನುಭವವನ್ನು ಹೊಂದಿರುವನೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟ ಹೊರತು ಅವನು ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

**6. ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.–** (1) ಯಾರೇ ಸದಸ್ಯನ ನೇಮಕಾತಿಯನ್ನು ಅವಧಿಗಿಂತ ಮುಂಚಿತವಾಗಿ ಸಮಾಪ್ತಗೊಳಿಸಿದ ಹೊರತು ಅವನು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಬಹುದಾಂಥಹ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಆತನ ಪದಾವಧಿಯು ಮುಗಿದ ತರುವಾಯ ಅವನು ಮರು ನೇಮಕಾತಿಗೆ ಅರ್ಹನಾಗಿರತಕ್ಕದ್ದು.

(2) ಸದಸ್ಯನು, ತಾನು ಸಹಿಮಾಡಿದ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು. ಆದರೆ ಆತನು, ಉತ್ತರಾಧಿಕಾರಿಯ ನೇಮಕಾತಿಯನ್ನು ರಾಜಪತ್ರದಲ್ಲಿ ಅಧಿಸೂಚಿಸುವವರೆಗೆ ತನ್ನ ಪದದಲ್ಲಿ ಮುಂದುವರಿಯತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಸದಸ್ಯನೊಬ್ಬನ ರಾಜೀನಾಮೆಯಿಂದಾಗಿ ಅಥವಾ ಯಾವುದೇ ಇತರ ಕಾರಣದಿಂದಾಗಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನವನ್ನು, ಹೊಸ ನೇಮಕಾತಿಯ ಮೂಲಕ ಭರ್ತಿ ಮಾಡತಕ್ಕದ್ದು.

(4) ಒಬ್ಬ ಸದಸ್ಯನನ್ನು ಕೇಂದ್ರ ಸರ್ಕಾರವು ಯುಕ್ತವೆಂದು ಭಾವಿಸುವಂತೆ, ಪೂರ್ಣಕಾಲಿಕ ಅಥವಾ ಅಂಶಕಾಲಿಕ ಸದಸ್ಯನನ್ನಾಗಿ ನೇಮಕ ಮಾಡಿಕೊಳ್ಳಬಹುದು.

(5) ಅಧ್ಯಕ್ಷ ಮತ್ತು ಇತರ ಸದಸ್ಯರ ಸೇವಾ ನಿಬಂಧನೆ ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**7. ಯಾರೇ ಸದಸ್ಯನ ತಾತ್ಕಾಲಿಕ ಗೈರುಹಾಜರಿ.–** ಯಾರೇ ಸದಸ್ಯನು, ಅಶಕ್ತತೆಯಿಂದಾಗಿ ಅಥವಾ ಅನ್ಯಥಾ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ತಾತ್ಕಾಲಿಕವಾಗಿ ಅಸಮರ್ಥನಾದರೆ ಅಥವಾ ಅವನು ರಜೆ ಪಡೆದು ಗೈರುಹಾಜರಾದರೆ ಅಥವಾ ಅವನ ಪದವು ಖಾಲಿಯಾಗುವುದನ್ನು ಒಳಗೊಳ್ಳದ ಇತರ ಸನ್ನಿವೇಶದಲ್ಲಿ ಅನ್ಯಥಾ ಕೇಂದ್ರ ಸರ್ಕಾರವು, ಆತನ ಸ್ಥಾನದಲ್ಲಿ ಕಾರ್ಯನಿರ್ವಹಿಸಲು ಬೇರೆ ವ್ಯಕ್ತಿಯನ್ನು ನೇಮಕ ಮಾಡಬಹುದು.

**8. ಮಂಡಲಿಯ ಸಭೆಗಳು.–** ಮಂಡಲಿಯು, ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳಲ್ಲಿ ಉಪಬಂಧಿಸಬಹುದಾದಂಥ ಸಮಯ ಮತ್ತು ಸ್ಥಳಗಳಲ್ಲಿ ತನ್ನ ಸಭೆಗಳನ್ನು ನಡೆಸತಕ್ಕದ್ದು ಮತ್ತು ಆ ಸಭೆಗಳಲ್ಲಿ, ವ್ಯವಹಾರ ನಡೆಸುವ ಬಗ್ಗೆ ಅಂಥ ಪ್ರಕ್ರಿಯಾ ನಿಯಮಗಳನ್ನು ಅನುಸರಿಸತಕ್ಕದ್ದು.

**9. ಮಂಡಲಿಯಲ್ಲಿ ಸ್ಥಾನಗಳು ಖಾಲಿ ಇರುವುದು ಮುಂತಾದವುಗಳ ನಿಮಿತ್ತ ಅದರ ಕಾರ್ಯಗಳು ಅಥವಾ ವ್ಯವಹರಣೆಗಳು ಅಸಿಂಧುವಾಗದಿರುವುದು.–** ಮಂಡಲಿಯಲ್ಲಿ ಯಾವುದೇ ಸ್ಥಾನವು ಖಾಲಿಯಿದೆಯೆಂಬ ಅಥವಾ ಅದರ ಸದಸ್ಯನ ನೇಮಕಾತಿಯಲ್ಲಿ ಯಾವುದೇ ದೋಷವಿದೆಯೆಂಬ ಕಾರಣಮಾತ್ರದಿಂದಲೇ ಆ ಮಂಡಲಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯು ಅಸಿಂಧುವಾಗಿದೆಯೆಂದು ಭಾವಿಸತಕ್ಕದ್ದಲ್ಲ.

**10. ಸಲಹಾ ಸಮಿತಿಯ ನೇಮಕಾತಿ.–** ಮಂಡಲಿಯು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅನುಕೂಲವಾಗುವಂತೆ ಕಾಲಕಾಲಕ್ಕೆ ಒಂದು ಅಥವಾ ಹೆಚ್ಚು ಸಲಹಾ ಸಮಿತಿ ಅಥವಾ ಸಮಿತಿಗಳನ್ನು ನೇಮಕ ಮಾಡಬಹುದು.

**11. ನಿರ್ದಿಷ್ಟ ಉದ್ದೇಶಗಳಿಗಾಗಿ ಮಂಡಲಿಯ ಜೊತೆ ಕೆಲವು ವ್ಯಕ್ತಿಗಳ ತಾತ್ಕಾಲಿಕ ಸಹಯೋಗ.–** (1) ಮಂಡಲಿಯು, ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳಿಂದ ನಿರ್ಧರಿಸಬಹುದಾದಂತಹ ರೀತಿಯಲ್ಲಿ ಮತ್ತು ಅಂತಹ ಉದ್ದೇಶಗಳಿಗಾಗಿ, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳ ನಿರ್ವಹಣೆಗೆ ಯಾವ ವ್ಯಕ್ತಿಯ ಸಹಾಯ ಅಥವಾ ಸಲಹೆಯನ್ನು ಪಡೆಯಬಯಸುವುದೋ ಆ ವ್ಯಕ್ತಿಯನ್ನು ತನ್ನ ಜೊತೆ ಸಹಯೋಗಿಸಿಕೊಳ್ಳಬಹುದು.

(2) (1)ನೆಯ ಉಪಪ್ರಕರಣದ ಮೇರೆಗೆ ಮಂಡಲಿಯು ಒಬ್ಬ ವ್ಯಕ್ತಿಯ ಸಹಯೋಗವನ್ನು ಯಾವ ಉದ್ದೇಶಕ್ಕಾಗಿ ಪಡೆದಿದೆಯೋ, ಆ ಉದ್ದೇಶಕ್ಕೆ ಸಂಗತವಾಗುವಂತೆ ಮಾತ್ರ ಆ ವ್ಯಕ್ತಿಯು ಮಂಡಲಿಯ ಚರ್ಚೆಯಲ್ಲಿ ಭಾಗವಹಿಸುವ ಹಕ್ಕು ಹೊಂದಿರತಕ್ಕದ್ದು. ಆದರೆ ಅವನಿಗೆ ಮಂಡಲಿಯ ಸಭೆಯಲ್ಲಿ ಮತ ನೀಡುವ ಹಕ್ಕು ಇರತಕ್ಕದ್ದಲ್ಲ ಮತ್ತು ಯಾವುದೇ ಇತರ ಉದ್ದೇಶಕ್ಕಾಗಿ ಅವನನ್ನು ಸದಸ್ಯನೆಂದು ಪರಿಗಣಿಸತಕ್ಕದ್ದಲ್ಲ.

**12. ಮಂಡಲಿಯ ಸಿಬ್ಬಂದಿ.–** ಈ ಸಂಬಂಧದಲ್ಲಿ, ಕೇಂದ್ರ ಸರ್ಕಾರವು ರಚಿಸಬಹುದಾದ ನಿಯಮಗಳಿಗೆ ಒಳಪಟ್ಟು, ಮಂಡಲಿಯು ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ಸಮರ್ಪಕವಾಗಿ ನೆರವೇರಿಸಲು ಅಥವಾ ತನ್ನ ಅಧಿಕಾರಗಳನ್ನು ದಕ್ಷತೆಯಿಂದ ಚಲಾಯಿಸಲು ಅನುಕೂಲವಾಗುವಂತೆ ತನಗೆ ಸೂಕ್ತವೆಂದು ಕಂಡುಬರುವಂತಹ ಅಧಿಕಾರಿಗಳನ್ನು ನೇಮಕ ಮಾಡಬಹುದು ಮತ್ತು ಅವರ ಪ್ರಕಾರ್ಯಗಳನ್ನು ಹಾಗೂ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನು ನಿರ್ಧರಿಸಬಹುದು.

## ಅಧ್ಯಾಯ– III

## ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು

**13. ಯಾವ ವಿಷಯಗಳ ಬಗ್ಗೆ ಸಲಹೆ ನೀಡಲು ಮಂಡಲಿಯನ್ನು ಅಧಿಕೃತಗೊಳಿಸಬಹುದು.–** ಮಂಡಲಿಯು, ಕೆಳಕಂಡ ಎಲ್ಲ ಪ್ರಕಾರ್ಯಗಳನ್ನು ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಂಡಲಿಗೆ ಅಧಿಕಾರ ನೀಡಬಹುದು. ಆ ಪ್ರಕಾರ್ಯಗಳು ಯಾವುವೆಂದರೆ:–

(ಎ) ತನ್ನ ಕಾರ್ಯಾಚರಣೆಯ ಪ್ರದೇಶದೊಳಗಿನ ಯಾವುದೇ ನಿರ್ದಿಷ್ಟ ಅಂತರ ರಾಜ್ಯ ನದಿ ಅಥವಾ ನದಿ ಕಣಿವೆಯ ವಿನಿಯಮ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಯಾವುದೇ ವಿಷಯದಲ್ಲಿ ಹಿತಾಸಕ್ತಿ ಹೊಂದಿರುವ ಸರ್ಕಾರಗಳಿಗೆ ಸಲಹೆ ನೀಡುವುದು ಮತ್ತು ವಿಶೇಷವಾಗಿ, ರಾಜ್ಯಗಳ ನಡುವಿನ ವಿವಾದಗಳನ್ನು ಇತ್ಯರ್ಥಪಡಿಸುವ ದೃಷ್ಟಿಯಿಂದ ಅವುಗಳ ಕಾರ್ಯಚಟುವಟಿಕೆಗಳನ್ನು ಸಮನ್ವಯಗೊಳಿಸುವ ಸಂಬಂಧದಲ್ಲಿ ಸಲಹೆ ನೀಡುವುದು

ಮತ್ತು ಈ ಕೆಳಕಂಡ ಉದ್ದೇಶಗಳ ಬಗ್ಗೆ ಅಂತರ ರಾಜ್ಯ ನದಿ ಅಥವಾ ನದಿ ಕಣಿವೆಗಳ ವಿಷಯದಲ್ಲಿ ಕೈಗೊಳ್ಳಲಾದ ಕಾರ್ಯಕ್ರಮಗಳ ಸಂಬಂಧದಲ್ಲಿ ಗರಿಷ್ಠ ಫಲಿತಾಂಶವನ್ನು ಸಾಧಿಸುವುದು,-

(i) ಅಂತರ ರಾಜ್ಯ ನದಿಯ ಜಲ ಸಂಪನ್ಮೂಲಗಳ ಸಂರಕ್ಷಣೆ, ನಿಯಂತ್ರಣ ಮತ್ತು ಗರಿಷ್ಠ ಉಪಯೋಗ,

(ii) ನೀರಾವರಿ, ನೀರು ಸರಬರಾಜು ಅಥವಾ ಚರಂಡಿ ವ್ಯವಸ್ಥೆ- ಸ್ಕೀಮುಗಳ ಪ್ರವರ್ತನೆ ಮತ್ತು ಕಾರ್ಯಾಚರಣೆ,

(iii) ಜಲ ವಿದ್ಯುತ್ ಅಭಿವೃದ್ಧಿ ಸ್ಕೀಮುಗಳ ಪ್ರವರ್ತನೆ ಮತ್ತು ಕಾರ್ಯಾಚರಣೆ,

(iv) ಪ್ರವಾಹ ನಿಯಂತ್ರಣ ಸ್ಕೀಮುಗಳ ಪ್ರವರ್ತನೆ ಮತ್ತು ಕಾರ್ಯಾಚರಣೆ,

(v) ನೌಕಾಯಾನದ ಪ್ರವರ್ತನೆ ಮತ್ತು ನಿಯಂತ್ರಣ,

(vi) ವನ ನಿರ್ಮಾಣ ಸ್ಕೀಮಿನ ಪ್ರವರ್ತನೆ ಮತ್ತು ಭೂ ಸವೆತದ ನಿಯಂತ್ರಣ,

(vii) ಅಂತರ ರಾಜ್ಯ ನದಿ ಜಲ ಮಾಲಿನ್ಯದ ನಿವಾರಣೆ,

(viii) ನಿಯಮಿಸಬಹುದಾದಂತಹ ಇತರ ವಿಷಯಗಳು.

(ಬಿ) ಅಂತರ ರಾಜ್ಯ ನದಿ ಅಥವಾ ನದಿ ಕಣಿವೆಗಳ ನಿಯಂತ್ರಣ ಅಥವಾ ಅಭಿವೃದ್ಧಿಯ ಉದ್ದೇಶಕ್ಕಾಗಿ ವಿವಿಧೋದ್ದೇಶದ ಸ್ಕೀಮುಗಳನ್ನೊಳಗೊಂಡ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಮಂಡಲಿಯು ಸಿದ್ಧಪಡಿಸಿದ ಸ್ಕೀಮನ್ನು ಕಾರ್ಯಗತಗೊಳಿಸುವುದಕ್ಕಾಗಿ ಕ್ರಮ ಕೈಗೊಳ್ಳಲು ಆಸಕ್ತವಾಗಿರುವ ಸರ್ಕಾರಗಳಿಗೆ ಸಲಹೆ ನೀಡುವುದು;

(ಸಿ) ಮಂಡಲಿಯು ಸಿದ್ಧಪಡಿಸಿದ ಯಾವುದೇ ಸ್ಕೀಮನ್ನು ಕಾರ್ಯಗತಗೊಳಿಸುವಲ್ಲಿ ತಗಲುವ ಮತ್ತು ಕಾರ್ಯಗತಗೊಳಿಸುವಾಗ ಕೈಗೊಳ್ಳಲಾದ ಯಾವುದೇ ಕಾಮಗಾರಿಗಳ ನಿರ್ವಹಣಾ ವೆಚ್ಚಗಳನ್ನು ಹಿತಾಸಕ್ತಿ ಹೊಂದಿರುವ ಸರ್ಕಾರಗಳಲ್ಲಿ ಹಂಚುವುದು;

(ಡಿ) ಹಿತಾಸಕ್ತಿ ಹೊಂದಿರುವ ಸರ್ಕಾರಗಳು ಕೈಗೊಂಡ ಕಾರ್ಯಕ್ರಮಗಳ ಪ್ರಗತಿಯನ್ನು ವೀಕ್ಷಿಸುವುದು;

(ಇ) ಮೇಲಿನ ಯಾವುದೇ ಪ್ರಕಾರ್ಯಗಳಿಗೆ ಪೂರಕವಾದ, ಪ್ರಾಸಂಗಿಕವಾದ ಅಥವಾ ಆನುಷಂಗಿಕವಾದ ಯಾವುದೇ ಇತರ ವಿಷಯ.

**14. ಮಂಡಲಿಯ ಪ್ರಕಾರ್ಯಗಳು.**- (1) ಕೇಂದ್ರ ಸರ್ಕಾರವು, ಹಿತಾಸಕ್ತಿ ಹೊಂದಿರುವ ಸರ್ಕಾರಗಳೊಂದಿಗೆ ಸಮಾಲೋಚಿಸಿದ ತರುವಾಯ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ

ನಿರ್ದಿಷ್ಟಪಡಿಸಿರಬಹುದಾದಂತೆ, 13ನೇ ಪ್ರಕರಣದ ಮೇರೆಗಿನ ಎಲ್ಲ ಪ್ರಕಾರ್ಯಗಳನ್ನು ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ಮಂಡಲಿಗೆ ಅಧಿಕಾರ ನೀಡಬಹುದು.

(2) ಮಂಡಲಿಯು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ನೀಡಲಾದ ಅಧಿಕಾರಗಳನ್ನು ತನ್ನ ಕಾರ್ಯಾಚರಣೆಯ ಪ್ರದೇಶದೊಳಗೆ ಚಲಾಯಿಸತಕ್ಕದ್ದು ಮತ್ತು ಎಲ್ಲ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(3) ಮಂಡಲಿಯು ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನೆರವೇರಿಸುವಾಗ ಎಲ್ಲ ಹಂತಗಳಲ್ಲಿ ಹಿತಾಸಕ್ತಿ ಹೊಂದಿರುವ ಸರ್ಕಾರಗಳೊಂದಿಗೆ ಸಮಾಲೋಚನೆ ನಡೆಸತಕ್ಕದ್ದು ಮತ್ತು ಅಂತಹ ಸರ್ಕಾರಗಳ ನಡುವೆ ಸಾಧ್ಯವಾದಷ್ಟುಮಟ್ಟಿಗೆ ಒಮ್ಮತವೇರ್ಪಡುವ ಹಾಗೆ ಪ್ರಯತ್ನಿಸತಕ್ಕದ್ದು.

**15. ಮಂಡಲಿಯು ಸ್ಕೀಮುಗಳನ್ನು ಸಿದ್ಧಪಡಿಸುವುದು ಮತ್ತು ಅವುಗಳನ್ನು ಕಾರ್ಯಗತಗೊಳಿಸುವುದು.**- (1) ಮಂಡಲಿಯು 13ನೇ ಪ್ರಕರಣದ (ಬಿ) ಖಂಡದ ಮೇರೆಗೆ ಪ್ರಕಾರ್ಯಗಳನ್ನು ನೆರವೇರಿಸಲು ಅಧಿಕಾರ ಪಡೆದಿರುವಲ್ಲಿ, ಅದು ತನ್ನ ಕಾರ್ಯಾಚರಣೆಯ ಪ್ರದೇಶದಲ್ಲಿನ ಯಾವುದೇ ಅಂತರ ರಾಜ್ಯ ನದಿಯ ಅಥವಾ ನದಿ ಕಣಿವೆಯ ವಿನಿಯಮ ಅಥವಾ ಅಭಿವೃದ್ಧಿಯ ಉದ್ದೇಶಕ್ಕಾಗಿ, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳಿಗೆ ಅನುಗುಣವಾಗಿರುವ ಸ್ಕೀಮುಗಳನ್ನು ಕಾಲಕಾಲಕ್ಕೆ ಸಿದ್ಧಪಡಿಸಬಹುದು.

(2) ಯಾವುದೇ ಅಂತಹ ಸ್ಕೀಮನ್ನು ಸಿದ್ಧಪಡಿಸಿದ ತರುವಾಯ ಮಂಡಲಿಯು, ಸ್ಕೀಮಿನ ಸಂಬಂಧದಲ್ಲಿ ಹಿತಾಸಕ್ತಿ ಹೊಂದಿರುವ ಸರ್ಕಾರಗಳೊಂದಿಗೆ ಮತ್ತು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸತಕ್ಕದ್ದು ಮತ್ತು ಅವುಗಳ ಸಲಹೆಗಳೇನಾದರೂ ಇದ್ದರೆ ಅವುಗಳನ್ನು ಪರಿಶೀಲಿಸಿದ ತರುವಾಯ ಆ ಸ್ಕೀಮನ್ನು ಅದು ಸ್ಥಿರೀಕರಿಸಬಹುದು, ಮಾರ್ಪಾಟುಗೊಳಿಸಬಹುದು ಅಥವಾ ತಿರಸ್ಕರಿಸಬಹುದು.

(3) ಉಪಪ್ರಕರಣ (2)ರ ಮೇರೆಗೆ ಸ್ಥಿರೀಕರಿಸಿದ ಅಥವಾ ಮಾರ್ಪಾಡುಗೊಳಿಸಿದ ಸ್ಕೀಮು ಆ ತರುವಾಯ ಅಂತಿಮ ಸ್ಕೀಮು ಆಗಿರತಕ್ಕದ್ದು ಮತ್ತು ಅದನ್ನು ಅನುಮೋದಿತ ಸ್ಕೀಮು ಎಂಬುದಾಗಿ ಕರೆಯತಕ್ಕದ್ದು.

(4) ಯಾವುದೇ ಸ್ಕೀಮಿಗೆ ಅನುಮೋದನೆ ನೀಡುವ ಮುಂಚೆ ಮಂಡಲಿಯು ಸ್ಕೀಮನ್ನು ಕಾರ್ಯಗತಗೊಳಿಸುವುದಕ್ಕೆ ಕ್ರಮ ಕೈಗೊಳ್ಳುವಲ್ಲಿ ಮತ್ತು ಆ ಸ್ಕೀಮನ್ನು ಕಾರ್ಯಗತಗೊಳಿಸುವಲ್ಲಿ ಕೈಗೊಳ್ಳಬೇಕಾದ ಯಾವುದೇ ಕಾಮಗಾರಿಯ ನಿರ್ವಹಣೆಗೆ ತಗಲಬಹುದಾದ ಸಂಭವನೀಯ ವೆಚ್ಚಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ವೆಚ್ಚಗಳನ್ನು ಒಪ್ಪಿಕೊಳ್ಳಬಹುದಾದ ಪ್ರಮಾಣಕ್ಕನುಸಾರ ಹಿತಾಸಕ್ತಿ ಹೊಂದಿರುವ ಸರ್ಕಾರಗಳಿಗೆ ಹಂಚತಕ್ಕದ್ದು ಅಥವಾ ಒಪ್ಪಿಗೆಯಾಗದಿದ್ದರೆ ಹಿತಾಸಕ್ತಿ ಹೊಂದಿರುವ ಸರ್ಕಾರಗಳು ಆ ಯೋಜನೆಯಿಂದ ಪಡೆಯುವ ಲಾಭವನ್ನು ಆಧರಿಸಿ ಮಂಡಲಿಯು, ನಿರ್ಧರಿಸಬಹುದಾದಂತೆ ಹಂಚಿಹಾಕತಕ್ಕದ್ದು.

(5) ಪ್ರತಿಯೊಂದು ಅನುಮೋದಿತ ಸ್ಕೀಮನ್ನು ಹಿತಾಸಕ್ತಿ ಹೊಂದಿರುವ ಸರ್ಕಾರಗಳಿಗೆ ಕಳಿಸತಕ್ಕದ್ದು ಮತ್ತು ಸ್ಕೀಮನ್ನು ಕಾರ್ಯಗತಗೊಳಿಸಲು ಕ್ರಮಗಳನ್ನು ಕೈಗೊಳ್ಳುವಂತೆ ಮಂಡಲಿಯು ಆ ರಾಜ್ಯಗಳಿಗೆ ಸಲಹೆ ಮಾಡಬಹುದು ಮತ್ತು ಅನುಮೋದಿತ ಸ್ಕೀಮಿನ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಸಹ ಕಳಿಸತಕ್ಕದ್ದು.

(6) ಕೇಂದ್ರ ಸರ್ಕಾರವು, ಈ ಸಂಬಂಧದಲ್ಲಿ ಯಾವುದೇ ಹಿತಾಸಕ್ತಿ ಹೊಂದಿರುವ ಸರ್ಕಾರದಿಂದ ಅಥವಾ ಅನ್ಯಥಾ ಮನವಿಯನ್ನು ಸ್ವೀಕರಿಸಿದ ಮೇಲೆ ಸ್ಕೀಮನ್ನು ಕಾರ್ಯಗತಗೊಳಿಸುವುದಕ್ಕೆ ಅವಶ್ಯವಾಗಬಹುದಾದಂತಹ ಕ್ರಮಗಳನ್ನು ಕೈಗೊಳ್ಳಲು ಆಸಕ್ತ ಸರ್ಕಾರಗಳಿಗೆ ನೆರವು ನೀಡಬಹುದು.

**16. ಮಂಡಲಿಯ ಸಾಮಾನ್ಯ ಅಧಿಕಾರಗಳು.**- ಮಂಡಲಿಯು ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ಸಮರ್ಥವಾಗಿ ನೆರವೇರಿಸುವ ಉದ್ದೇಶಕ್ಕಾಗಿ, ತನ್ನ ಕಾರ್ಯಾಚರಣೆಯ ಪ್ರದೇಶದಲ್ಲಿ,-

(ಎ) ಅದು ಅವಶ್ಯವೆಂದು ಭಾವಿಸುವಂತಹ ಚರ ಮತ್ತು ಸ್ಥಿರ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳಬಹುದು, ಧಾರಣ ಮಾಡಬಹುದು ಮತ್ತು ವಿಲೆ ಮಾಡಬಹುದು;

(ಬಿ) ಅದು ಅವಶ್ಯವೆಂದು ಭಾವಿಸುವಂತಹ ಪ್ರಾರಂಭಿಕ ತನಿಖೆಯನ್ನು ಅಥವಾ ಸಮೀಕ್ಷೆಗಳನ್ನು ಅಥವಾ ಇತರ ಕ್ರಮಗಳನ್ನು ಕೈಗೊಳ್ಳಬಹುದು;

(ಸಿ) ಅಂತರ ರಾಜ್ಯ ನದಿ ಅಥವಾ ನದಿ ಕಣಿವೆಗಳ ವಿನಿಯಮ ಅಥವಾ ಅಭಿವೃದ್ಧಿಯ ಸಂಬಂಧದಲ್ಲಿ ಹಿತಾಸಕ್ತಿ ಹೊಂದಿರುವ ಯಾವುದೇ ಸರ್ಕಾರವು ಕೈಗೊಂಡ ಯಾವುದೇ ಕಾಮಗಾರಿಯನ್ನು ಪರಿಶೀಲಿಸಬಹುದು ಅಥವಾ ಪರಿಶೀಲಿಸುವ ವ್ಯವಸ್ಥೆ ಮಾಡಬಹುದು;

(ಡಿ) ಜಲ ವಿದ್ಯುತ್ ಉತ್ಪಾದನೆ, ನೀರಾವರಿ, ನೌಕಾ ಸಂಚಾರ, ಪ್ರವಾಹ ನಿಯಂತ್ರಣ, ಭೂಸಾರ ಸಂರಕ್ಷಣೆ, ಭೂ ಉಪಯೋಗ ಮತ್ತು ಸಂಬಂಧಪಟ್ಟ ರಚನಾ ಸಂಬಂಧವಾದ ಮತ್ತು ವಿನ್ಯಾಸ ಸಂಬಂಧವಾದ ಅಂಶಗಳು ಮುಂತಾದ ಜಲ ಸಂಪನ್ಮೂಲಗಳ ಸಂರಕ್ಷಣೆ, ನಿಯಂತ್ರಣ ಅಥವಾ ಉಪಯೋಗದ ವಿವಿಧ ಅಂಶಗಳ ಬಗ್ಗೆ ಸಂಶೋಧನೆಯನ್ನು ನಡೆಸಬಹುದು ಮತ್ತು ಅವುಗಳಲ್ಲಿ ಸಮನ್ವಯ ಉಂಟುಮಾಡಬಹುದು;

(ಇ) ಅದು ಅವಶ್ಯವೆಂದು ಭಾವಿಸುವಂಥ ಭೂ ವಿವರಣೆ, ಹವಾಮಾನ, ಜಲ ಲಕ್ಷಣ ಮತ್ತು ಅಂತರ್ಜಲ- ಇವುಗಳಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಸಂಗ್ರಹಿಸಬಹುದು;

(ಎಫ್) ಅಂತರ ರಾಜ್ಯ ನದಿ ಅಥವಾ ನದಿ ಕಣಿವೆಗಳ ವಿನಿಯಮ ಅಥವಾ ಅಭಿವೃದ್ಧಿಯ ವಿವಿಧ ಅಂಶಗಳಿಗೆ ಸಂಬಂಧಿಸಿದಂಥ ಅಂಕಿ ಅಂಶಗಳನ್ನು ಅಥವಾ ಇತರ ಮಾಹಿತಿಯನ್ನು ಪ್ರಕಟಿಸಬಹುದು;

(ಜಿ) ಈ ಕೆಳಕಂಡವುಗಳಿಗೆ ಸಂಬಂಧಿಸಿದಂತೆ, ಮಂಡಲಿಗೆ ಅವಶ್ಯವಿರುವಂಥ ಮಾಹಿತಿಯನ್ನು ಒದಗಿಸಲು ಯಾವುದೇ ಹಿತಾಸಕ್ತಿ ಹೊಂದಿರುವ ಸರ್ಕಾರವನ್ನು ಅಗತ್ಯಪಡಿಸಬಹುದು:-

(i) ಅಂತರ ರಾಜ್ಯ ನದಿ ಅಥವಾ ನದಿ ಕಣಿವೆಗಳ ವಿನಿಯಮ ಅಥವಾ ಅಭಿವೃದ್ಧಿ ಬಗ್ಗೆ ಆ ಸರ್ಕಾರವು ಕೈಗೊಳ್ಳಲಾದ ಕ್ರಮಗಳು;

(ii) ಭೂ ವಿವರಣೆ, ಹವಾಮಾನ, ಜಲ ಲಕ್ಷಣ ಮತ್ತು ಅಂತರ್ಜಲ- ಇವುಗಳಿಗೆ ಸಂಬಂಧಿಸಿದ ಅಂಕಿ ಅಂಶಗಳು;

(iii) ನಿಯಮಿಸಬಹುದಾದಂತಹ ಇತರ ವಿಷಯಗಳು.

**17. ಮಂಡಲಿಗೆ ಸಂದಾಯ.**- ಈ ಸಂಬಂಧದಲ್ಲಿ ಕಾನೂನಿನ ಮೂಲಕ ಸಂಸತ್ತು ಯುಕ್ತ ವಿನಿಯೋಗವನ್ನು ಮಾಡಿದ ತರುವಾಯ ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ಮಂಡಲಿಯ ಪ್ರಕಾರ್ಯಗಳ ನಿರ್ವಹಣೆಗಾಗಿ ತಾನು ಅವಶ್ಯಕವೆಂದು ಪರಿಗಣಿಸಬಹುದಾದ ಮೊಬಲಗನ್ನು ಪ್ರತಿ ಹಣಕಾಸು ವರ್ಷದಲ್ಲಿ ಮಂಡಲಿಗೆ ಸಂದಾಯ ಮಾಡತಕ್ಕುದು.

**18. ಮಂಡಲಿಯ ನಿಧಿ.**- (1) ಮಂಡಲಿಯು ತನ್ನದೇ ಆದ ಒಂದು ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರಗಳು ಮಂಡಲಿಗೆ ಕಾಲಕಾಲಕ್ಕೆ ಸಂದಾಯ ಮಾಡಬಹುದಾದಂಥ ಮೊಬಲಗುಗಳನ್ನು ಮತ್ತು ಮಂಡಲಿಯು ಸ್ವೀಕರಿಸುವ ಇತರ ಎಲ್ಲ ಜಮೆಗಳನ್ನು ಮಂಡಲಿಯ ನಿಧಿಗೆ ಜಮೆ ಮಾಡತಕ್ಕದ್ದು ಮತ್ತು ಮಂಡಲಿಯು ಸಂದಾಯ ಮಾಡಬೇಕಾದ ಎಲ್ಲ ಮೊತ್ತಗಳನ್ನು ಆ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(2) ಮಂಡಲಿಯು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ತಾನು ಸೂಕ್ತವೆಂದು ಭಾವಿಸುವಂತಹ ಮೊತ್ತಗಳನ್ನು ವೆಚ್ಚ ಮಾಡಬಹುದು ಮತ್ತು ಅಂತಹ ಮೊತ್ತಗಳನ್ನು ಮಂಡಲಿಯ ನಿಧಿಯಿಂದ ಸಂದಾಯವಾಗತಕ್ಕ ವೆಚ್ಚಗಳು ಎಂಬುದಾಗಿ ಪರಿಗಣಿಸತಕ್ಕದ್ದು.

**19. ಆಯವ್ಯಯ.**- ಮಂಡಲಿಯು ಪ್ರತಿ ವರ್ಷ ಮುಂಬರುವ ಹಣಕಾಸು ವರ್ಷದ ಸಂಬಂಧದಲ್ಲಿ ಅಂದಾಜು ಜಮೆ ಮತ್ತು ವೆಚ್ಚಗಳನ್ನು ತೋರಿಸುವಂಥ ಬಜೆಟನ್ನು ಅಂತಹ ಸಮಯದಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಮತ್ತು ಆಸಕ್ತ ಸರ್ಕಾರಗಳಿಗೆ ಕಳುಹಿಸತಕ್ಕದ್ದು.

**20. ವಾರ್ಷಿಕ ವರದಿ.**- ಮಂಡಲಿಯು, ಹಿಂದಿನ ವರ್ಷದಲ್ಲಿ ತಾನು ಕೈಗೊಂಡ ಚಟುವಟಿಕೆಗಳ ಬಗ್ಗೆ ವಾಸ್ತವಿಕವಾದ ಮತ್ತು ಸಮಗ್ರವಾದ ನಿರೂಪಣೆ ಇರುವ ವಾರ್ಷಿಕ ವರದಿಯನ್ನು, ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ಸಮಯದಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಮತ್ತು ಹಿತಾಸಕ್ತಿ ಹೊಂದಿರುವ ರಾಜ್ಯ ಸರ್ಕಾರಗಳಿಗೆ ಸಲ್ಲಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅಂತಹ ಪ್ರತಿಯೊಂದು ವರದಿಯನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು.

**21. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.**- (1) ಮಂಡಲಿಯು ತನ್ನ ಲೆಕ್ಕಪತ್ರಗಳ ಪುಸ್ತಕಗಳನ್ನು ಮತ್ತು ಸಂಬಂಧಪಟ್ಟ ಇತರ ಪುಸ್ತಕಗಳನ್ನು ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಇಡುವ ವ್ಯವಸ್ಥೆ ಮಾಡತಕ್ಕದ್ದು.

(2) ಮಂಡಲಿಯ ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂತಹ ಸಮಯದಲ್ಲಿ ಮತ್ತು ರೀತಿಯಲ್ಲಿ ಪರಿಶೋಧಿಸುವ ವ್ಯವಸ್ಥೆ ಮಾಡತಕ್ಕದ್ದು.

## ಅಧ್ಯಾಯ- IV

### ಸಂಕೀರ್ಣ

**22. ಮಧ್ಯಸ್ಥಿಕೆ.**- (1) ಎರಡು ಅಥವಾ ಹೆಚ್ಚು ಹಿತಾಸಕ್ತಿ ಹೊಂದಿರುವ ಸರ್ಕಾರಗಳ ನಡುವೆ ಕೆಳಕಂಡವುಗಳ ಸಂಬಂಧದಲ್ಲಿ, ಎಂದರೆ:-

(ಎ) ಈ ಅಧಿನಿಯಮದ ಮೇರೆಗೆ ಮಂಡಲಿಯು ನೀಡಿದ ಯಾವುದೇ ಸಲಹೆ;

(ಬಿ) ಮಂಡಲಿಯು ನೀಡಿದ ಯಾವುದೇ ಸಲಹೆಗನುಸಾರ ಯಾವುದೇ ಹಿತಾಸಕ್ತಿ ಹೊಂದಿರುವ ಸರ್ಕಾರವು ಕೈಗೊಂಡ ಯಾವುದೇ ಕ್ರಮಗಳು;

(ಸಿ) ಮಂಡಲಿಯು ನೀಡಿದ ಯಾವುದೇ ಸಲಹೆಗನುಸಾರ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಯಾವುದೇ ಹಿತಾಸಕ್ತಿ ಹೊಂದಿರುವ ಸರ್ಕಾರದ ನಿರಾಕರಣೆ ಅಥವಾ ನಿರ್ಲಕ್ಷ್ಯ;

(ಡಿ) ಮಂಡಲಿಯು ನೀಡಿದ ಯಾವುದೇ ಸಲಹೆಯಿಂದ ದೊರೆಯುವ ಪ್ರಯೋಜನಗಳನ್ನು ಅಥವಾ ಉದ್ಭವಿಸುವ ಹಣಕಾಸು ಹೊಣೆಗಾರಿಕೆಗಳನ್ನು ಹಂಚಿಕೊಳ್ಳುವುದು;

(ಇ) ಈ ಅಧಿನಿಯಮದ ವ್ಯಾಪ್ತಿಗೊಳಪಡುವ ಅಥವಾ ಅದಕ್ಕೆ ಸಂಬಂಧಪಡುವ ಅಥವಾ ಅದರಿಂದ ಉದ್ಭವಿಸುವ ಯಾವುದೇ ಇತರ ವಿಷಯ

- ಇವುಗಳ ಸಂಬಂಧದಲ್ಲಿ ಯಾವುದೇ ವಿವಾದಗಳು ಅಥವಾ ಭಿನ್ನಾಭಿಪ್ರಾಯಗಳು ಉಂಟಾದಾಗ ಆ ವಿವಾದ ಅಥವಾ ಭಿನ್ನಾಭಿಪ್ರಾಯದ ವಿಷಯವನ್ನು ಯಾವುದೇ ಹಿತಾಸಕ್ತಿ ಹೊಂದಿರುವ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮಧ್ಯಸ್ಥಿಕೆಗೆ ಒಪ್ಪಿಸಬಹುದು.

(2) ಈ ಸಂಬಂಧದಲ್ಲಿ ಭಾರತದ ಮುಖ್ಯ ನ್ಯಾಯಾಧೀಶನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ವ್ಯಕ್ತಿಗಳ ಪೈಕಿಯಿಂದ ಆಯ್ಕೆ ಮಾಡಿದ ವ್ಯಕ್ತಿಯನ್ನು ಮಧ್ಯಸ್ಥನೆಂದು ನೇಮಕ ಮಾಡತಕ್ಕದ್ದು.

(3) ಮಧ್ಯಸ್ಥನು, ತನ್ನ ಮುಂದಿರುವ ವ್ಯವಹರಣೆಗಳಲ್ಲಿ ತನಗೆ ನೆರವು ನೀಡಲು, ಇಬ್ಬರು ಅಥವಾ ಹೆಚ್ಚು ಜನರನ್ನು ನಿರ್ಧಾರಕರೆಂದು ನೇಮಕ ಮಾಡಿಕೊಳ್ಳಬಹುದು.

(4) ಮಧ್ಯಸ್ಥನ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ವಿವಾದದಲ್ಲಿ ಪಕ್ಷಕಾರರಾಗಿರುವವರು ಆ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು ಮತ್ತು ಅದನ್ನು ಅವರು ಪಾಲಿಸತಕ್ಕದ್ದು.

(5) ಮಧ್ಯಸ್ಥಿಕೆ ಅಧಿನಿಯಮ, 1940 ರಲ್ಲಿರುವುದು ಯಾವುದೂ ಈ ಪ್ರಕರಣದ ಮೇರೆಗಿನ ಮಧ್ಯಸ್ಥಿಕೆಗಳಿಗೆ ಅನ್ವಯವಾಗತಕ್ಕದ್ದಲ್ಲ.

**23. ವಿವರಪಟ್ಟಿಕೆಗಳು ಮತ್ತು ವರದಿಗಳು.–** ಮಂಡಲಿಯು, ತನ್ನ ನಿಧಿ ಅಥವಾ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವಿವರಪಟ್ಟಿಕೆಗಳು, ಅಂಕಿಅಂಶಗಳು, ಲೆಕ್ಕಪತ್ರಗಳು ಮತ್ತು ಇತರ ಮಾಹಿತಿಯನ್ನು ಆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**24. ಅಧಿಕಾರಗಳ ಪ್ರತ್ಯಾಯೋಜನೆ.–** ಮಂಡಲಿಯು, ಲಿಖಿತದಲ್ಲಿರುವ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಮಂಡಲಿಯ ದಿನನಿತ್ಯದ ಆಡಳಿತವನ್ನು ದಕ್ಷ ರೀತಿಯಲ್ಲಿ ನಡೆಸಲು ಅದು ಅವಶ್ಯವೆಂದು ಭಾವಿಸುವಂತೆ, ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳೇನಾದರೂ ಇದ್ದರೆ ಅವುಗಳಿಗೆ ಒಳಪಟ್ಟು ಅಧ್ಯಕ್ಷನಿಗೆ ಅಥವಾ ಯಾರೇ ಇತರ ಸದಸ್ಯನಿಗೆ ಅಥವಾ ಮಂಡಲಿಯ ಯಾರೇ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

**25. ಮಂಡಲಿಯ ಸದಸ್ಯರು ಮತ್ತು ಅಧಿಕಾರಿಗಳು ಲೋಕನೌಕರರಾಗಿರುವುದು.–** ಮಂಡಲಿಯ ಎಲ್ಲ ಸದಸ್ಯರು ಮತ್ತು ಅಧಿಕಾರಿಗಳು, ಈ ಅಧಿನಿಯಮದ ಯಾವುದೇ ಉಪಬಂಧಕ್ಕನುಸಾರ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಹಾಗೆ ಕಾರ್ಯನಿರ್ವಹಿಸುವರೆಂದು ತಾತ್ಪರ್ಯವಾಗುವಾಗ, ಭಾರತೀಯ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಅವರನ್ನು ಲೋಕನೌಕರರೆಂದು ಭಾವಿಸತಕ್ಕದ್ದು.

**26. ಸದ್ಭಾವನೆಯಿಂದ ಕೈಗೊಳ್ಳಲಾದ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅನುಸರಣೆಯಲ್ಲಿ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಲಾದ ಯಾವುದೇ ಕಾರ್ಯದ ಸಂಬಂಧದಲ್ಲಿ ಮಂಡಲಿಯ ಯಾರೇ ಸದಸ್ಯನ ಅಥವಾ ಅಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**27. ಮಂಡಲಿಯ ವಿಘಟನೆ ಮತ್ತು ಆಸ್ತಿಗಳ ಹಾಗೂ ಹೊಣೆಗಾರಿಕೆಗಳ ವರ್ಗಾವಣೆ.–** (1) ಮಂಡಲಿಯು ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನೆರವೇರಿಸಿದೆಯೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ, ಅದು, ಹಿತಾಸಕ್ತಿ ಹೊಂದಿರುವ ಸರ್ಕಾರಗಳೊಂದಿಗೆ ಸಮಾಲೋಚನೆ ನಡೆಸಿದ ತರುವಾಯ ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ ಅಂಥ ಅಧಿಸೂಚನೆಯಲ್ಲಿ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತಹ

ದಿನಾಂಕದಿಂದ ಮಂಡಲಿಯು ವಿಘಟನೆಯಾಗತಕ್ಕದ್ದೆಂದು ಘೋಷಿಸಬಹುದು ಮತ್ತು ಮಂಡಲಿಯು ಆ ಪ್ರಕಾರ ವಿಘಟಿತವಾಗಿದೆಯೆಂದು ಭಾವಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯ ಮೂಲಕ ಮಂಡಲಿಯು ವಿಘಟಿತವಾದ ತರುವಾಯ,-

(ಎ) ಮಂಡಲಿಯಲ್ಲಿ ನಿಹಿತವಾಗಿರುವ ಎಲ್ಲ ಸ್ವತ್ತುಗಳು, ನಿಧಿಗಳು ಅಥವಾ ಮಂಡಲಿಯು ವಸೂಲು ಮಾಡತಕ್ಕ ಬಾಕಿಗಳು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸರ್ಕಾರದಲ್ಲಿ ಅಥವಾ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಆ ಸರ್ಕಾರವು ಅಥವಾ ಪ್ರಾಧಿಕಾರವು ಬಾಕಿಗಳನ್ನು ವಸೂಲು ಮಾಡತಕ್ಕದ್ದು.

(ಬಿ) ಮಂಡಲಿಯ ಮೇಲೆ ಜಾರಿಗೊಳಿಸಬಹುದಾದಂತಹ ಎಲ್ಲ ಹೊಣೆಗಾರಿಕೆಗಳನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಸರ್ಕಾರದ ಅಥವಾ ಪ್ರಾಧಿಕಾರದ ಮೇಲೆ ಮಾತ್ರವೇ ಜಾರಿಗೊಳಿಸತಕ್ಕದ್ದು.

**28. ನಿಯಮ ರಚನಾಧಿಕಾರ.-** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲ ವಿಷಯಗಳ ಬಗ್ಗೆ ಅಥವಾ ಆ ಪೈಕಿ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ,-

(ಎ) ಮಂಡಲಿಯ ಸದಸ್ಯರ ಸಂಬಳ, ಭತ್ಯೆ ಮತ್ತು ಸೇವಾ ಷರತ್ತುಗಳು;

(ಬಿ) 13ನೇ ಪ್ರಕರಣದ (ಎ) ಖಂಡದ (viii)ನೇ ಉಪಖಂಡದ ಮೇರೆಗೆ ಹಿತಾಸಕ್ತಿ ಹೊಂದಿರುವ ಸರ್ಕಾರಗಳಿಗೆ ಮಂಡಲಿಯು ಸಲಹೆ ನೀಡಬಹುದಾದಂಥ ವಿಷಯಗಳು;

(ಸಿ) ಮಾಹಿತಿ ಸಲ್ಲಿಸುವಂತೆ ಹಿತಾಸಕ್ತಿ ಹೊಂದಿರುವ ಸರ್ಕಾರಗಳನ್ನು ಮಂಡಲಿಯು ಅಗತ್ಯಪಡಿಸಬಹುದಾದ ವಿಷಯಗಳು;

(ಡಿ) ಮಂಡಲಿಯು ಸಿದ್ಧಪಡಿಸಿದ ಯಾವುದೇ ಸ್ಕೀಮನ್ನು ಕಾರ್ಯಗತಗೊಳಿಸಲು ಹಿತಾಸಕ್ತಿ ಹೊಂದಿರುವ ಸರ್ಕಾರಗಳಿಗೆ ಕೇಂದ್ರ ಸರ್ಕಾರವು ನೆರವು ನೀಡಬಹುದಾದ ರೀತಿ;

(ಇ) ಮಂಡಲಿಯು, ತನ್ನ ಬಜೆಟನ್ನು ಮತ್ತು ವಾರ್ಷಿಕ ವರದಿಯನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಮತ್ತು ಹಿತಾಸಕ್ತಿ ಹೊಂದಿರುವ ಸರ್ಕಾರಗಳಿಗೆ ಸಲ್ಲಿಸಬೇಕಾದಂತಹ ನಮೂನೆ ಮತ್ತು ಅವಧಿ;

(ಎಫ್) ಮಂಡಲಿಯು ತನ್ನ ಲೆಕ್ಕಗಳನ್ನು ನಿರ್ವಹಿಸಬೇಕಾದಂತಹ ನಮೂನೆ ಮತ್ತು ರೀತಿ ಮತ್ತು ಅಂತಹ ಲೆಕ್ಕಗಳನ್ನು ಪರಿಶೋಧಿಸಿಕೊಳ್ಳಬೇಕಾದಂತಹ ಅವಧಿ ಮತ್ತು ರೀತಿ;

(ಜಿ) ಕೇಂದ್ರ ಸರ್ಕಾರಕ್ಕೆ ಮಂಡಲಿಯು ಸಲ್ಲಿಸಬೇಕಾದ ವಿವರಪಟ್ಟಿಕೆಗಳು ಮತ್ತು ಮಾಹಿತಿ;

(ಹೆಚ್) ಈ ಅಧಿನಿಯಮದ ಮೇರೆಗೆ, ವಿವಾದವನ್ನು ಮಧ್ಯಸ್ಥಿಕೆಗೆ ಒಪ್ಪಿಸಬಹುದಾದಂತಹ ನಮೂನೆ ಮತ್ತು ರೀತಿ;

(ಐ) ಈ ಅಧಿನಿಯಮದ ಮೇರೆಗೆ ಮಧ್ಯಸ್ಥಿಕೆಯ ವ್ಯವಹರಣೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ;

(ಜೆ) ಮಂಡಲಿಯ ಅಧಿಕಾರಿಗಳ ನೇಮಕದ ವಿಧಾನ ಮತ್ತು ಅಂತಹ ಅಧಿಕಾರಿಗಳ ಸೇವಾ ಷರತ್ತುಗಳು ಮತ್ತು ನಿಬಂಧನೆಗಳು;

(ಕೆ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟುಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಮೇಲೆ ಹೇಳಿದ ಅಧಿವೇಶನದ ಅಥವಾ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ, ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**29. ವಿನಿಯಮ ರಚನಾಧಿಕಾರ.**- (1) ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು, ಭಾರತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮಕ್ಕೆ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳಿಗೆ ಅಸಂಗತವಾಗದಂಥ ಮತ್ತು ಕೆಳಕಂಡವುಗಳನ್ನು ವಿನಿಯಮಿಸುವ ವಿನಿಯಮಗಳನ್ನು ರಚಿಸಬಹುದು:-

(ಎ) ಮಂಡಲಿಯ ಸಭೆಗಳು ಮತ್ತು ಆ ಸಭೆಗಳಲ್ಲಿ ವ್ಯವಹಾರ ನಡೆಸುವ ಕಾರ್ಯವಿಧಾನ;

(ಬಿ) ಸಲಹಾ ಸಮಿತಿಗಳನ್ನು ನೇಮಕ ಮಾಡಬಹುದಾದ ರೀತಿ ಮತ್ತು ಆ ನೇಮಕದ ಉದ್ದೇಶ;

(ಸಿ) ಪ್ರಕರಣ 11ರ ಮೇರೆಗೆ ಮಂಡಲಿಯೊಂದಿಗೆ ವ್ಯಕ್ತಿಗಳನ್ನು ಸಹಯೋಗಿಸಿಕೊಳ್ಳಬಹುದಾದ ರೀತಿ ಮತ್ತು ಉದ್ದೇಶ;

(ಡಿ) ಮಂಡಲಿಯ ಸಲಹಾ ಸಮಿತಿಯ ಸದಸ್ಯರ ಮತ್ತು 11ನೇ ಪ್ರಕರಣದ ಮೇರೆಗೆ ಮಂಡಲಿಯೊಂದಿಗೆ ಸಹಯೋಗಿಸಿಕೊಳ್ಳುವ ವ್ಯಕ್ತಿಗಳ ಮತ್ತು ಮಂಡಲಿಯು ನೇಮಕ ಮಾಡುವ ಎಲ್ಲ ಅಧಿಕಾರಿಗಳ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟುಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಮೇಲೆ ಹೇಳಿದ ಅಧಿವೇಶನದ ಅಥವಾ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ವಿನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ವಿನಿಯಮವು ಆ ತರುವಾಯ, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮ ಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

* * *